ಸಿ.ಸಿ .ನಂ. 98/2023 ಪಿಡಬ್ಲೂಃ 1

ದಿನಾಂಕಃ 17-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

3. ನಿಪಿ-1 ರಲ್ಲಿ ನಮ್ಮ ಸಹಕಾರಿಯವರು ನನಗೆ ಅಧಿಕಾರ ನೀಡಿದ ಬಗ್ಗೆ ಯಾವುದೇ ಸೀಲ್ ಹಾಗೂ ಸಹಿ ಇಲ್ಲ ಎಂದರೆ ಸಾಕ್ಷಿ ಅದು ಯಥಾ ನಕಲು ಎಂದು ನುಡಿದಿರುತ್ತಾರೆ . ಯಥಾ ನಕಲು ಎಂಬ ಬಗ್ಗೆ ಮೂಲ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ನಿಪಿ-1 ರಲ್ಲಿ ನಮ್ಮ ಆಡಳಿತ ಮಂಡಳಿಯ ಸಹಿ ಹಾಗೂ ಸೀಲು ಇಲ್ಲ ಎಂದರೆ ಸರಿ . ದಿಃ 15-05-2017 ರಂದು ಸಹಕಾರಿಯಲ್ಲಿ ನಡೆದ ಆಡಳಿತ ಮಂಡಳಿಯ ಸಭಾ ನಡವಳಿ ಅದರ ಮೂಲ ಪ್ರತಿ ಎಂದರೆ ಸರಿ . ನಡವಳಿಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ನಿಪಿ-1 ರ ಪ್ರಕಾರ ಸಭಾ ನಡವಳಿಯ ಮೂಲ ಪ್ರತಿಯನ್ನು ನೋಡಿದರೆ ಮಾತ್ರ ನನಗೆ ಅಧಿಕಾರ ನೀಡುವ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ . ಸಾಕ್ಷಿ ನಿಪಿ-1 ಅದರ ಯಥಾ ನಕಲು ಎಂದು ನುಡಿದಿರುತ್ತಾರೆ . ನಿಪಿ-1 ನ್ನು ಮೇಲ್ನೋಟಕ್ಕೆ ನೋಡಿದರೆ ನನಗೆ ಅಧಿಕಾರ ನೀಡಿದ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸರಿಸ . ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಅಧಿಕಾರ ನೀಡಿಲ್ಲ ಎಂದರೆ ನೀಡಿದ್ದಾರೆ . ಆ ಬಗ್ಗೆ ನಾನು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ನಿಪಿ-1 ಯಥಾ ನಕಲು ದಾಖಲಾತಿ.

4. ಈ ಪ್ರಕರಣದ ಆರೋಪಿಗೆ ಈ ಮೊದಲು ಸಾಲ ನೀಡಿಲ್ಲ, ಇದೇ ಮೊದಲಿನ ಸಾಲ . ಸಾಲದ ಭದ್ರತೆಗಾಗಿ ಕರಾರು ಪತ್ರ , ಡಿಮಾಂಡ ಪ್ರಾಮಿಸರಿ ನೋಟ್ , ಆಧಾರ ಕಾರ್ಡ ಪಡೆದಿದ್ದೇವೆ . ನಿಪಿ-7 ಸಾಲದ ಅರ್ಜಿಯನ್ನು ನಮ್ಮ ಸಿಬ್ಬಂದಿ ಭರಣ ಮಾಡಿರುತ್ತಾರೆ . ನಮ್ಮ ಸಿಬ್ಬಂದಿ ಸಾಲದ ಅರ್ಜಿಯನ್ನು ಭರಣ ಮಾಡಿದ ಬಗ್ಗೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ . ಕರಾರು ಪತ್ರ , ಡಿಮಾಂಡ ಪ್ರಾಮಿಸರಿ ನೋಟ್ ಇವುಗಳನ್ನು ಸಹಿತ ನಮ್ಮ ಸಿಬ್ಬಂದಿಯವರೇ ಭರಣ ಮಾಡಿರುತ್ತಾರೆ ಎಂದರೆ ಸರಿ . ನಮ್ಮ ಸಿಬ್ಬಂದಿ ಭರಣ

ಮಾಡುವ ಸಮಯದಲ್ಲಿ ನಾನು ಇರಬಹುದು ನೆನಪಿಲ್ಲ. ಯಾವ ಸಿಬ್ಬಂದಿ ಭರಣ ಮಾಡಿರುತ್ತಾರೆ ನೆನಪಿಲ್ಲ. ಸಾಲದ ಕರಾರು ಪತ್ರ , ಡಿಮಾಂಡ ಪ್ರಾಮಿಸರಿ ನೋಟ್ , ಮುದ್ದತ್ತು ವಚನ ಪತ್ರ ಸಾಲಗಾರರಿಗೆ ತಿಳಿ ಹೇಳಿ ಸಹಿಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿ . ಸಾಲಗಾರರಿಂದ ಇವುಗಳನು ಭರಣ ಮಾಡಲು ತೊಂದರೆ ಇರಲಿಲ್ಲ , ಅವರು ಮಿಸ್ ಸ್ಟೆಕ್ ಆಗುತ್ತದೆ , ನೀವು ಭರಣ ಮಾಡಿ ನಾನು ಓದಿ ಸಹಿ ಮಾಡುತ್ತೇನೆ ಎಂದು ಅವರು ಹೇಳಿರುತ್ತಾರೆ . ನಮ್ಮ ಪ್ರಿಸ್ಕ್ರೈಡ್ ಫಾರ್ಮಗಳಲ್ಲಿ ಎಲ್ಲಿಯೂ ಕೂಡ ಸಾಲಗಾರರು ಓದಿ ಸಹಿ ಮಾಡಿದ್ದಾರೆ ಎಂದು ನಮೂದಿಲ್ಲ ಎಂದರೆ ಸರಿ . ಸಾಮಾನ್ಯವಾಗಿ ಸಾಲದ ಅರ್ಜಿ ಬಂದ ನಂತರ ಆಡಳಿತ ಮಂಡಳಿಯ ಸಭೆ ಆದ ನಂತರ ಸಾಲವನ್ನು ಮಂಜೂರು ಮಾಡುತ್ತೇವೆ . ಆಡಳಿತ ಮಂಡಳಿಯ ಸಭೆ ತಿಂಗಳಿಗೆ ಒಂದು ಬಾರಿ ಇರುತ್ತದೆ , ಅನಿವಾರ್ಯ ಇದ್ದಾಗ ತಿಂಗಳಿಗೆ ಎರಡು ಅಥವಾ ಮೂರು ಬಾರಿ ಸಭೆ ಇರುತ್ತದೆ . ನಮ್ಮ ಪ್ರಕಾರ ಈ ಪ್ರಕರಣದ ಸಾಲದ ಅರ್ಜಿ ಯಾವ ದಿನ ಮಂಜೂರಾಗಿದೆ ನೆನಪಿಲ್ಲ . ನಮ್ಮ ಸಹಕಾರಿಯ ಮಿಟಿಂಗ್ ಆಗದ ಹೊರತು ಅಲ್ಲಿಂದ ಷರಾ ಬರೆದ ಹೊರತು ಸಾಲ ಮಂಜೂರು ಆಗುವುದಿಲ್ಲ. ಈ ಪ್ರಕರಣದ ಸಾಲದ ಅರ್ಜಿ ನಿಪಿ-8 ದಿಃ 31-03-2020 ಕ್ಕೆ ಬಂದಿದೆ ಎಂದರೆ ಸಾಕ್ಷಿ 2-3 ದಿನ ಮುಂಚೆ ಬಂದಿರಬಹುದು , ಅಲ್ಲಿ ಬರೆಯುವುದು ಮಿಸ್ಟೇಕ್ ಆಗಿರಬಹುದು. ಮೂಲ ಪ್ರತಿ ಕಚೇರಿಯಲ್ಲಿದೆ ಹಾಜರು ಪಡಿಸಬಹುದು. ನಮ್ಮ ಪ್ರಕಾರ ಸಾಲದ ಅರ್ಜಿ ಯಾವತ್ತು ಬಂದಿದೆ ಮೂಲ ಪ್ರತಿ ಹಾಜರು ಪಡಿಸುತ್ತೇನೆ. ಈ ಪ್ರಕರಣದಲ್ಲಿ ಹಾಜರು ಪಡಿಸಿದಂತಹ ದಾಖಲೆಯನ್ನು ಬಿಟ್ಟು ಇನ್ನೊಂದು ಸಾಲದ ಅರ್ಜಿಯ ಮೂಲ ಪ್ರತಿ ಇದೆ . ನಿಪಿ-7 ರಲ್ಲಿಯೂ ಸಹ ದಿಃ 31-03-2020 ಎಂದು ಇದೆ ಎಂದರೆ ಸರಿ . ಆಡಳಿತ ಮಂಡಳಿಯ ಮಿಟಿಂಗ್ ದಿಃ 02-03-2020 ರಂದು ಆಗಿದೆ ಎಂದರೆ ಸರಿ . ಈ ದಾಖಲಾತಿಯ ಪ್ರಕಾರ ಸಾಲದ ಅರ್ಜಿ ಬರುವ ಮೊದಲೇ ಆಡಳಿತ ಮಂಡಳಿಯ ಮಿಟಿಂಗ್ ನಲ್ಲಿ ಅಪ್ರೂವಲ್ ಆಗಿದೆ ಎಂದರೆ ಸರಿಯಲ್ಲ. ದಿನಾಂಕ ಮಿಸ್ಟೇಕ್ ಆಗಿದೆ ಮೂಲ ಪ್ರತಿ ತಂದು ತೋರಿಸುತ್ತೇನೆ . ಸಾಲದ ಅರ್ಜಿಯ ನಿಪಿ-7 ಮೂಲ ಪ್ರತಿ ನಮ್ಮ ಬ್ಯಾಂಕಿನಲ್ಲಿ ಇದೆ . ಲೋನ್ ಮಾಡುವಾಗ 4-5 ದಾಖಲಾತಿಗಳನ್ನು ಒಟ್ಟಿಗೆ ಬರೆಯುತ್ತಾರೆ ಆದರೆ ಲೋನ್ ಅರ್ಜಿ ಮುಂಚೆಯೇ ಕೊಟ್ಟಿರುವುದು ಇರುತ್ತದೆ

ಎಂದು ಸಾಕ್ಷಿ ನುಡಿದಿರುತ್ತಾರೆ . ಲೋನ್ ಅರ್ಜಿ ಮುಂಚೆಯೇ ಕೊಟ್ಟಿರುತ್ತಾರೆ ಎಂದು ನನ್ನ ಹೇಳಿಕೆಯನ್ನು ಬಿಟ್ಟು ಬೇರೆ ದಾಖಲಾತಿ ಇಲ್ಲ ಎಂದರೆ ಸರಿ . ನೋಟಿಸಿನಲ್ಲಿ, ಫಿರ್ಯಾದಿನಲ್ಲಿ , ಪ್ರಮಾಣ ಪತ್ರದಲ್ಲಿ ದಿಃ 31-03-2020 ರಂದು ಸಾಲದ ಅರ್ಜಿ ಕೊಟ್ಟಿದ್ದಾರೆ ಎಂದು ಇದೆ ಎಂದರೆ ಸರಿಯಲ್ಲ . ನಮ್ಮ ಪ್ರಕಾರ ನಿಪಿ-7 ಸರಿಯಾದ ದಾಖಲೆ ಅಲ್ಲ ಎಂದರೆ ಸರಿ . ಅದರ ಮೂಲ ದಾಖಲಾತಿ ಇದೆ ಎಂದರೆ ಸರಿ . ಈ ದಾಖಲಾತಿ ತಪ್ಪು ಎಂಬುವ ಬಗ್ಗೆ ನಮ್ಮ ವಕೀಲರಿಗೆ ನಾವು ಮಾಹಿತಿ ಕೊಟ್ಟಿಲ್ಲ . ನಮ್ಮ ಪ್ರಮಾಣ ಪತ್ರದಲ್ಲಿ ನಿಪಿ-7 ತಪ್ಪು ದಾಖಲಾತಿ ಎಂದು ಎಲ್ಲೂ ನಮೂದು ಮಾಡಿಲ್ಲ ಎಂದರೆ ಸರಿ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.